# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ (ಹೊಸ ವಾರ್ಡ್ ಸಂಖ್ಯೆ.99) ವಾರ್ಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ: 07-01-2023 ರಂದು ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀಮತಿ ಶಾಂತ.ಬಿ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಡಾ॥ ಶಾಹೀನಾ, ವೈದ್ಯಾಧಿಕಾರಿಗಳು, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
4. ಶ್ರೀಮತಿ ವಿನುತ, ಸದಸ್ಯರು, ರವರು ಮಾತನಾಡಿ,
5. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ),

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ರವಿ, ಕಂದಾಯ ನಿರೀಕ್ಷಕರು,
2. ಶ್ರೀ ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು,
3. ಶ್ರೀ ಅಮಿತ್, ಸಹಾಯಕ ಅಭಿಯಂತರರು, ಬೀದಿ ದೀಪಗಳ ವಿಭಾಗ.
4. ಮಾರ್ಷಲ್, ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ,
5. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಸಂಚಾರ ಮತ್ತು ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೋಲೀಸ್ ಠಾಣೆ,
6. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
7. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ,
8. ಸಂಗೀತಾ, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
9. ಕಿರಿಯ/ಸಹಾಯಕ ಅಭಿಯಂತರರು, ಬೆಸ್ಕಾಂ ಇಲಾಖೆ,

ವಾರ್ಡ್ ಸಮಿತಿಯ ಪ್ರಾಸ್ತಾವಿಕ ಸಭೆಯ ಉದ್ದೇಶವನ್ನು ತಿಳಿಸಿ, ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ಸಭೆಯನ್ನು ನಡೆಸಲು ವಾರ್ಡ್ ಸಮಿತಿ ಅಧ್ಯಕ್ಷರನ್ನು ಕೋರಲಾಯಿತು.

**ಸಭೆಯ ನಡವಳಿಗಳು**

1) **ಘನತ್ಯಾಜ್ಯ ನಿರ್ವಹಣೆ:-**

- ಶ್ರೀಮತಿ ವಿನುತ, ಸದಸ್ಯರು, ರವರು ಮಾತನಾಡಿ, ವಾರ್ಡ್ ಪ್ರದೇಶದ ರಸ್ತೆಗಳ ಗುಡಿಸುವಿಕೆ ಕ್ರಮಬದ್ಧವಾಗಿ ನಡೆಯುತ್ತಿರುತ್ತದೆ. ಆದರೆ ದಿನನಿತ್ಯ ಸಕಾಲಕ್ಕೆ ಆಗುತ್ತಿರುವುದಿಲ್ಲ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಹಾಜರಿದ್ದ ಆರೋಗ್ಯ ನಿರೀಕ್ಷಕರು ಪ್ರಸ್ತುತ ಹಲವು ಪೌರಕಾರ್ಮಿಕರು ರಜೆಯಲ್ಲಿ ಇದ್ದ ಕಾರಣ ಸಕಾಲದಲ್ಲಿ ಗುಡಿಸಲು ವಿಳಂಭವಾಗಿರುತ್ತದೆ. ಇನ್ನು ಮುಂದೆ ಯಾವುದೇ ಅಡಚಣೆಯಾಗದೇ ರಸ್ತೆಗಳನ್ನು ಸ್ವಚ್ಛಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

2) **ಬೀದಿ ದೀಪಗಳ ನಿರ್ವಹಣೆ:-**

- **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ):-** ರಾಮಯ್ಯ ಬಡಾವಣೆ ಹಾಗೂ ಮಂಗಳ ಬಡಾವಣೆಯಲ್ಲಿ ಹಲವು ವಿದ್ಯುತ್ ದೀಪದ ಕಂಬಗಳಲ್ಲಿ ಡಿ.ಪಿ ಸ್ವಿಚ್‌ಗಳು ಹಾಗೂ ಟೈಮರ್‌ಗಳು ಹಾಳಾಗಿರುತ್ತದೆ ಎಂದು ಸಭೆಗೆ ತಿಳಿಸಿದಾಗ, ಸಭೆಯಲ್ಲಿ ಹಾಜರಿದ್ದ

ಬೀದಿದೀಪಗಳ ವಿಭಾಗದ ಅಭಿಯಂತರರು, ಕೂಡಲೇ ಡಿಪಿ ಸ್ವಿಚ್ ಗಳನ್ನು ಅಳವಡಿಸಿ, ಟೈಮರ್‌ಗಳನ್ನು ದುರಸ್ತಿಪಡಿಸುವುದಾಗಿ ಸಭೆಗೆ ತಿಳಿಸಿದರು.

3) **ಬೃಹತ್ ನೀರುಗಾಲುವೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

4) **ಆರೋಗ್ಯ ಇಲಾಖೆ:-**

- **ಆರೋಗ್ಯ ವೈದ್ಯಾಧಿಕಾರಿಗಳು ಮಾತನಾಡಿ:-** ಎಲ್ಲಾ ಕೋವಿಡ್ ಸಂಬಂಧಿಸಿದ ಪರೀಕ್ಷೆಗಳನ್ನು ಸದ್ಯಕ್ಕೆ ನಿಲ್ಲಿಸಲಾಗಿದ್ದು, ವ್ಯಾಕ್ಸಿನೇಷನ್, ಬೂಸ್ಟರ್ ವ್ಯಾಕ್ಸಿನೇಷನ್ ಮಾತ್ರ ಮಾಡಲಾಗುತ್ತಿರುತ್ತದೆ, ಹಾಗೂ ಯಾವುದೇ ಡೆಂಗ್ಯೂ ಫೀವರ್ ದೃಢಪಟ್ಟಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಮತ್ತು ಮಹತ್ವಾಕಾಂಕ್ಷೆಯ ಯೋಜನೆಯಾದ ನಮ್ಮ ಕ್ಲಿನಿಕ್ ಅನ್ನು ಶೀಘ್ರವಾಗಿ ಪ್ರಾರಂಭಿಸಲು ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳಲಾಗಿದೆ, ಸದರಿ ಕ್ಲಿನಿಕ್‌ಗೆ ವೈದ್ಯರು ಸಹ ನಿಯೋಜನೆ ಗೊಂಡಿರುವುದಾಗಿ ಹಾಗೂ ರ್‍ಯಾಕ್ಸ್ ಹಾಗೂ ಪೀಠೋಪಕರಣಗಳು ಮಾತ್ರ ಅವಶ್ಯಕತೆ ಇರುತ್ತದೆ ಎಂದು ಸಭೆಗೆ ತಿಳಿಸಿದರು.

5) **ಕಾಮಗಾರಿ ಇಲಾಖೆ:-** ಯಾವುದೇ ಸಮಸ್ಯೆ ಇರುವುದಿಲ್ಲ.

6) **ಕಂದಾಯ ಇಲಾಖೆ:-**

- **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ):-** ಪ್ರಸ್ತುತ ಬಿಬಿಎಂಪಿ ಯಲ್ಲಿ ಇ-ಖಾತಾ ಮಾಡಲಾಗುತ್ತಿದ್ದು, ಈ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ಕಂದಾಯ ನಿರೀಕ್ಷಕರುಗಳು ಮಾತನಾಡಿ ಕ್ರಯ ಪತ್ರ, ಕಂದಾಯ ರಶೀದಿ, ಪಾನ್ ಕಾರ್ಡ್, ಆಧಾರ್ ಕಾರ್ಡ್, ಕಟ್ಟಡದ ಛಾಯಾಚಿತ್ರಗಳನ್ನು ಸಲ್ಲಿಸಿದರೆ, ಪರಿಶೀಲಿಸಿ, ಇ-ಖಾತಾ ವನ್ನು ಮಾಡಿಕೊಡಲಾಗುವುದೆಂದು ಸಭೆಗೆ ತಿಳಿಸಿದರು.

7) **ಉದ್ಯಾನವನಗಳ ವಿಭಾಗ:-**

- **ಶ್ರೀಮತಿ ವಿನುತ, ಸದಸ್ಯರು, ರವರು ಮಾತನಾಡಿ:-** ವಾರ್ಡ್ ಪ್ರದೇಶದಲ್ಲಿರುವ ಎಲ್ಲಾ ಉದ್ಯಾನವಗಳಲ್ಲಿ ಜಿಮ್ ಸಲಕರಣೆಗಳು ಹಾಳಾಗಿರುತ್ತವೆ. ಪಾಥ್‌ವೇ ಅಳವಡಿಸಿರುವ ಬಣ್ಣ ಕೂಡ ಅಳಿಸಿ ಹೋಗಿರುತ್ತದೆ. ಉದ್ಯಾನವನಗಳಲ್ಲಿ ಹಲವು ಮರಗಳು/ಗಿಡಗಳನ್ನು ಟ್ರಿಮ್ ಮಾಡಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದಾಗ, ಈ ಬಗ್ಗೆ ಚರ್ಚಿಸಿ, ಕೂಡಲೇ ಕ್ರಮ ಕೈಗೊಳ್ಳಲು ಉದ್ಯಾನವನಗಳ ವಿಭಾಗದ ಅಧಿಕಾರಿಗಳಿಗೆ ಸಭೆಯು ಸರ್ವಾನುಮತದಿಂದ ಆದೇಶಿಸಿದರು.

8) **ಅರಣ್ಯ ವಿಭಾಗ:-**

- **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ):-** ರಾಮಯ್ಯ ಬಡಾವಣೆ ಹಾಗೂ ಬಿಡಿಎ ಬಡಾವಣೆಯಲ್ಲಿ ಹಲವು ಕಡೆಗಳಲ್ಲಿ ಮರಗಳನ್ನು ಟ್ರಿಮ್ ಮಾಡಬೇಕಾಗಿರುತ್ತದೆ, ಅವುಗಳನ್ನು ಕೂಡಲೇ ಕತ್ತರಿಸಲು ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದು, ಈ ವರೆವಿಗೂ ಕ್ರಮ ವಹಿಸದೇ ಇರುವುದರಿಂದ, ಅರಣ್ಯ ವಿಭಾಗದ ಅಧಿಕಾರಿಗಳು ಕೂಡಲೇ ಪ್ರದೇಶವನ್ನು ಪರಿಶೀಲಿಸಿ, ಮರಗಳನ್ನು ಟ್ರಿಮ್ ಮಾಡುವ ಕಾಮಗಾರಿಯನ್ನು ಕೈಗೊಳ್ಳಲು ಅರಣ್ಯ ವಿಭಾಗದವರಿಗೆ ಸೂಚಿಸಲು ಸಭೆಗೆ ತಿಳಿಸಿದರು.

9) **ಪಶುಸಂಗೋಪನೆ ವಿಭಾಗ:-** ಯಾವುದೇ ಸಮಸ್ಯೆ ಇರುವುದಿಲ್ಲ.

10) **ನೀರು ಸರಬರಾಜು:-** ಯಾವುದೇ ಸಮಸ್ಯೆ ಇರುವುದಿಲ್ಲ.

11) **ಪೊಲೀಸ್/ಸಂಚಾರ ಮತ್ತು ಕಾನೂನು ಸುವ್ಯವಸ್ಥೆ:-**

- **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ):-** ರಾಮಯ್ಯ ಬಡಾವಣೆಯಲ್ಲಿ ಅನೇಕ ಕಡೆಗಳಲ್ಲಿ ಪುಂಡ ಪೋಕಿರಿಗಳು ಗಾಂಜಾ ಸೇವನೆ ಮಾಡಿಕೊಂಡು ಸಾರ್ವಜನಿಕರಿಗೆ ತೊಂದರೆಮಾಡುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಕ್ರಮ ವಹಿಸಲು ತಿಳಿಸಿದಾಗ, ಈ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಕೂಡಲೇ ಈ ಬಗ್ಗೆ ಕ್ರಮ ವಹಿಸಲು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಕಾನೂನು ಸುವ್ಯವಸ್ಥೆ ಅಧಿಕಾರಿಗಳಿಗೆ ತಿಳಿಸಿದರು.

12) **ಬೆಸ್ಕಾಂ ಇಲಾಖೆ :-** ಯಾವುದೇ ಸಮಸ್ಯೆ ಇರುವುದಿಲ್ಲ.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.29/99, ಕಾಚರಕನಹಳ್ಳಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.29/99, ಕಾಚರಕನಹಳ್ಳಿ

**ಪ್ರತಿಯನ್ನು**

1) ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
4) ವಾರ್ಡ್ ಕಮಿಟಿಯ ಸದಸ್ಯರಿಗೆ.